# ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಪಾಂಡವಪುರ.

**ಸಿ.ಸಿ.ನಂ.36/2022**
**9 ನೇ ಫೆಬ್ರವರಿ 2023**

ಫಿರ್ಯಾದಿಃ- ಃ ಪಾಂಡವಪುರ ಠಾಣಾ ಪೊಲೀಸರು

ಃ ವಿರುದ್ದ ಃ

ಆರೋಪಿಃ- ಃ ಹೊನ್ನಶೆಟ್ಟಿ.ಟಿ.ಎಚ್ (40)
ಬಿನ್ ಹೊಂಬಾಳಶೆಟ್ಟಿ,
ವಾಸಃ ತಿರುಮಾಲಾಪುರ ಗ್ರಾಮ,
ಪಾಂಡವಪುರ ತಾಃ ಮಂಡ್ಯ.

## ಆರೋಪಣೆ

**ಶ್ರೀ ಕಿಶೋರ್ ಕುಮಾರ್ ಕೆ.ಎನ್. ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಪಾಂಡವಪುರ ಆದ ನಾನು ಆರೋಪಿಗಳಾದ ನಿಮ್ಮನ್ನು ಈ ಕೆಳಕಂಡಂತೆ ಆರೋಪಣೆಗೆ ಒಳಪಡಿಸುವುದೇನೆಂದರೆ,**

ನಿಮ್ಮ ಮೇಲೆ ಹೊರಿಸುವ ಆರೋಪಣೆ ಏನೆಂದರೆಃ-

<u>**ಮೊದಲನೆಯದಾಗಿಃ**</u> ಆರೋಪಿಯಾದ ನೀವು ಅಪರಾಧವನ್ನು ಎಸಗುವ ಉದ್ದೇಶದಿಂದ, ದಿನಾಂಕಃ 08.08.2021 ರಂದು ಸಂಜೆ 5.30 ಗಂಟೆ ಸಮಯದಲ್ಲಿ ಪಾಂಡವಪುರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಪಾಂಡವಪುರ ತಾಲ್ಲೂಕು, ಹರಳಹಳ್ಳಿ ಗ್ರಾಮದ ಮಮತ ಎಂಬುವರ ಮನೆಯ ನೇರದ ಪಾಂಡವಪುರ ಮೈಸೂರು ಮುಖ್ಯ ರಸ್ತೆಯಲ್ಲಿ ಚಾಸಾ-1 ರವರ ತಂದೆ ಗೋಪಾಲ್ ಎಂಬುವವರು ಪಾಂಡವಪುರ ಕಡೆಯಿಂದ ಹರಳಹಳ್ಳಿ ಕಡೆಗಾದಂತೆ ರಸ್ತೆಯ ಎಡಭಾಗದಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ, ಆರೋಪಿ 1 ರವರು ಕೆಎ-11-ಬಿ-9886 ರ ಲಾರಿಗೆ ಚಾಲಕನಾಗಿ ಲಾರಿಯನ್ನು ಪಾಂಡವಪುರ ಕಡೆಯಿಂದ ಮೈಸೂರು ಕಡೆಗಾದಂತೆ ಅತಿವೇಗ ಹಾಗೂ ಅಜಾಗರುಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಡೆದುಕೊಂಡು ಹೋಗುತ್ತಿದ್ದ ಚಾಸಾ-1 ರವರ ತಂದೆ ಮೃತ ಗೋಪಾಲ್ ಎಂಬುವರಿಗೆ ಹಿಂದಿನಿಂದ ಡಿಕ್ಕಿ ಪಡಿಸಿ ಅಪಘಾತವುಂಟು ಮಾಡಿರುತ್ತೀರಿ, **ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 279 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಬರುವಂತೆ ಎಸಗಿರು ತ್ತೀರಿ.**

**<u>ಎರಡನೆಯದಾಗಿಃ</u>** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ಅಪರಾಧವನ್ನು ಎಸಗುವ ಉದ್ದೇಶದಿಂದ ನಿಮ್ಮ ಬಾಬ್ತು ವಾಹನವನ್ನು ಅತಿವೇಗ, ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಅಪಘಾತವುಂಟು ಮಾಡಿದ ಪರಿಣಾಮ, ಗೋಪಾಲ್ ಎಂಬುವರು ಕೆಳಗೆ ಬಿದ್ದಾಗ ತಲೆಗೆ, ಕೈಕಾಲುಗಳಿಗೆ ಪೆಟ್ಟಾಗಿದ್ದು, ಪಾಂಡವಪುರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ನಂತರ ಹೆಚ್ಚಿನ ಚಿಕಿತ್ಸೆಯನ್ನು ಮೈಸೂರಿನ ಡಿ.ಆರ್.ಎಂ. ಆಸ್ಪತ್ರೆಯಲ್ಲಿ ಪಡೆದರು ಚಿಕಿತ್ಸೆ ಫಲಕಾರಿಯಾಗದೇ ದಿನಾಂಕಃ 09.08.2021 ರಂದು ಸುಂಜೆ ಸುಮಾರು ಮೈಸೂರು ಡಿ.ಆರ್.ಎಂ. ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ, **ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 304(ಎ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.**

**<u>ಮೂರನೆಯದಾಗಿಃ</u>** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ಅಪಘಾತದ ವಿಷಯವನ್ನು ಸಂಬಂಧಪಟ್ಟ ಪೋಲೀಸ್ ಠಾಣೆಗೆ ತಿಳಿಸದೆ ಹಾಗೂ ಗಾಯಾಳುವಾಗಿದ್ದ ಮೃತ ಗೋಪಾಲ ರವರಿಗೆ ಪ್ರಥಮ ಚಿಕಿತ್ಸೆಯನ್ನು ಕೊಡಿಸದೆ, ಸಮೀಪದ ಪೊಲೀಸ್ ಠಾಣೆಗೆ ಅಪಘಾತದ ಮಾಹಿತಿಯನ್ನು ತಿಳಿಸದೆ ಅಪಘಾತದ ಸ್ಥಳದಿಂದ ಹೊರಟು ಹೋಗಿರುತ್ತೀರಿ, **ಆ ಮೂಲಕ- ಮೋಟರು ವಾಹನ ಕಾಯಿದೆ 187 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದೊಳಗೆ ಬರುವಂತೆ ಎಸಗಿರುತ್ತೀರಿ.**

1. ಕನ್ನಡದಲ್ಲಿ ಓದಿ ಹೇಳಿದ ಮೇಲ್ಕಂಡ ಆಪಾದನೆಯ ಸಂಗತಿಗಳು ನಿಮಗೆ ಅರ್ಥವಾಯಿತಾ?

ಉ :

2. ಮೇಲ್ಕಂಡ ಆಪಾದನೆಯನ್ನು ನೀವು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆ ಯಾಗಬೇಕಾ?

ಉ :

ಈ ಮೇಲ್ಕಂಡ ಆಪಾದನೆಯನ್ನು ಆರೋಪಿಗೆ ಕನ್ನಡದಲ್ಲಿ ಓದಿ ಹೇಳಿ ಆರೋಪಿತರು ಹೇಳಿದ ಉತ್ತರವನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಗಿದೆ.

**(ಕಿಶೋರ್ ಕುಮಾರ್ ಕೆ.ಎನ್.)**
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ಪಾಂಡವಪುರ.**

**ಆರೋಪಿ ಸಹಿಃ**